**ಪಾಠ-13** **ಮಾರ್ಚ್ 20-26**

# ಭೂಮಿಯ ಮರುಸೃಷ್ಟಿ



**ಸಬ್ಬತ್ತು ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 65:17–25, ಯೆಶಾಯ 66:1–19, ಯೆಶಾಯ 66:19–21, ಯೆಶಾಯ 66:24–24.

**ಸ್ಮರಣವಾಕ್ಯ : "ಇಗೋ, ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಸೃಷ್ಟಿಸುವೆನು; ಮೊದಲಿದ್ದದ್ದನ್ನು ಯಾರೂ ಜ್ಞಾಪಿಸಿಕೊಳ್ಳರು. ಅದು ನೆನಪಿಗೆ ಬಾರದು" (ಯೆಶಾಯ 65:17).**

ಒಂದು ದಿನ, ಹನ್ನೆರಡು ವರ್ಷದ ಒಬ್ಬ ಹುಡುಗನು ಖಗೋಳಶಾಸ್ತ್ರದ ಒಂದು ಪುಸ್ತಕವನ್ನು ಆಗ ತಾನೆ ಓದಿ ಮುಗಿಸಿ ಶಾಲೆಗೆ ಹೋಗಲ್ಒಲ್ಲದೆ ಮನೆಯಲ್ಲುಳಿದನು ಅವನ ತಾಯಿಯು ಅವನನ್ನು ಕುಟುಂಬದ ವೈದ್ಯರ ಬಳಿಗೆ ಕರೆದುಕೊಂಡು ಹೋದಳು. ವೈದ್ಯರು ಆತನನ್ನು ಕುರಿತು, ಬಿಲ್ಲಿ ಏನು ವಿಷಯ? ನಿನಗೆ ಯಾಕೆ ಶಾಲೆಗೆ ಹೋಗಲು ಅಥವಾ ವ್ಯಾಸಂಗ ಮಾಡಲು ಇಷ್ಟವಿಲ್ಲ? ಎಂದು ಕೇಳಿದರು. ಅದಕ್ಕೆ ಆತನು, "ವೈದ್ಯರೇ, ಸೂರ್ಯನು ಉರಿದು ಉರಿದು ಒಂದು ದಿನ ಸುಟ್ಟು ಹೋಗುತ್ತಾನೆ ನಂತರ ಭೂಮಿಯ ಮೇಲಿನ ಎಲ್ಲಾ ಜೀವಗಳು ನಾಶವಾಗುತ್ತವೆಯೆಂದು ಈ ಖಗೋಳಶಾಸ್ತ್ರದ ಪುಸ್ತಕದಲ್ಲಿ ಬರೆದಿದೆ, ಎಲ್ಲವೂ ನಾಶವಾಗಿರುವುದಾದರೆ ನಾನು ಶಾಲೆಗೆ ಹೋಗುವುದಕ್ಕೆ ಯಾವ ಕಾರಣವೂ ಇಲ್ಲ ಎಂದು ಉತ್ತರ ಕೊಟ್ಟನು. ಅದಕ್ಕೆ ಅವನ ತಾಯಿಯು ಆವೇಶದಿಂದ ನಿನಗೆ ಅದರ ಉಸಾಬರಿಬೇಡ "ಅದು

---

* ಈ ಪಾಠವನ್ನು ಮಾರ್ಚ್ 27ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ನಿನ್ನ ವ್ಯವಹಾರವಲ್ಲ! ಅದು ನಿನ್ನ ವ್ಯವಹಾರವಲ್ಲ!" ಎಂದು ಕೂಗಾಡಿದರು.

ಆವಾಗ ವೈದ್ಯರು ಮುಗಳ್‌ನಗುತ್ತಾ ಬಿಲ್ಲಿ, ಆದರೆ ನೀನು ಕಳವಳ ಪಡಬೇಕಾಗಿಲ್ಲ ಯಾಕೆಂದರೆ ಇದೆಲ್ಲಾ ನಡೆಯುವ ಹೊತ್ತಿಗೆ ನಾವೆಲ್ಲರೂ ಸತ್ತು ಬಹಳ ವರ್ಷಗಳೇ ಕಳೆದುಹೋಗಿರುತ್ತವೆ ಎಂದು ಹೇಳಿದರು ಹೌದು, ಇದು ಸಮಸ್ಯೆಯ ಒಂದು ಭಾಗ, ಅಂತ್ಯದಲ್ಲಿ ಹೇಗೂ ನಾವೆಲ್ಲರೂ ಸತ್ತು ಹೋಗಿರುತ್ತೇವೆ.

ಸುದ್ಧೆವವೇನೆಂದರೆ, ನಮ್ಮ ಅಸ್ತಿತ್ವವು ನಮ್ಮ ಮರಣದೊಂದಿಗೆ ಕೊನೆಯಾಗುವುದಿಲ್ಲ ಇದಕ್ಕೆ ತದ್ವಿರುದ್ಧವಾಗಿ ನಾವು ಮತ್ತೆ ಜೀವ ಪಡೆಯುತ್ತೇವೆ, ಈ ಲೋಕವು ನೂತನವಾಗಿ ಸೃಷ್ಟಿಯಾದಾಗ ನಮಗೆ ನಿತ್ಯಜೀವವು ಸಿಗುತ್ತದೆ.

**ಭಾನುವಾರ** **ಮಾರ್ಚ್ 21**

## ನೂತನಾಕಾಶಮಂಡಲ ಮತ್ತು ನೂತನಭೂಮಂಡಲ (ಯೆಶಾಯ 65:17–25)

ಯೆಶಾಯ 65:17–25 ವಚನಗಳನ್ನು ಓದಿರಿ. ಯಾವ ತರದ ಮರುಸೃಷ್ಟಿಯನ್ನು ದೇವರು ಇಲ್ಲಿ ವಾಗ್ದಾನ ಮಾಡಿದ್ದಾನೆ?

ದೇವರ ಹೊಸಸೃಷ್ಟಿಯ ವಾಗ್ದಾನವು ಈ ವಾಕ್ಯದಿಂದ ಶುರುವಾಗುತ್ತದೆ: **"ಇಗೋ, ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಸೃಷ್ಟಿಸುವೆನು; ಮೊದಲಿದ್ದನ್ನು ಯಾರೂ ಜ್ಞಾಪಿಸಿಕೊಳ್ಳರು, ಅದು ನೆನಪಿಗೆ ಬಾರದು"** (ಯೆಶಾಯ 65:17). ಈ ಒಂದು ಗಮನಾರ್ಹವಾದ ಪ್ರವಾದನೆಯಲ್ಲಿ ದೇವರು ಯೆರೂಸಲೇಮನ್ನು ಉಲ್ಲಾಸದ ನಿವಾಸವನ್ನಾಗಿಯೂ ಅದರ ಜನರನ್ನು ಹರ್ಷಭರಿತರನ್ನಾಗಿಯೂ ಮಾಡುವೆನು ಎಂದು ವಾಗ್ದಾನ ಮಾಡುತ್ತಾನೆ (ಯೆಶಾಯ 65:18). ಪಟ್ಟಣದಲ್ಲಿ ಇನ್ನೆಂದಿಗೂ ಗೋಳಾಟವು ಇರುವುದಿಲ್ಲ (ಯೆಶಾಯ 65:19), ಅಕಾಲಿಕವಾಗಿ ಯಾರೂ ಮರಣ ಹೊಂದುವುದಿಲ್ಲ (ಯೆಶಾಯ 65:20) ಅವರು ಮಾಡುವ ಕೆಲಸ ಉಳಿಯುವುದು ಅವರಿಗೆ ಹುಟ್ಟಿದ ಮಕ್ಕಳು ಸಹ ಉಳಿಯುವರು (ಯೆಶಾಯ 65:21–23) ಅವರು ಮೊರೆಯಿಡುವುದಕ್ಕೆ ಮೊದಲೇ ಉತ್ತರ ಕೊಡುವೆನು ಎಂದು ಭರವಸೆ ಕೊಡುತ್ತಾನೆ.

ಹೀಗೆ ಇರುವುದು ಬಹಳ ಚೆನ್ನಾಗಿರುತ್ತದೆ, ಆದರೂ ಇದು ನಮ್ಮ ಅಂತಿಮ ನಿರೀಕ್ಷೆಯಾದ ಅಂತ್ಯದ ಮರುಸ್ಥಾಪನೆಯಲ್ಲ ಯಾಕೆ?

ಹಾಗಾಗಿ, ಈ ಸಮಾಧಾನದ ಜೀವನವು ವಾಗ್ದಾತ್ತ ದೇಶದಲ್ಲಿ ಇರುತ್ತದೆ. ಇಲ್ಲಿ ಜನರು ದೀರ್ಘಕಾಲ ಬಾಳಿ ಬದುಕಿದರೂ, ನಂತರ ಸಾಯುತ್ತಾರೆ. ನೂತನಾಕಾಶಮಂಡಲ ಮತ್ತೂ ನೂತನಭೂಮಂಡಲವು ಸೃಷ್ಟಿಯಾದಾಗ ನಿಸರ್ಗದಲ್ಲಿ ನಾವು ನಿರೀಕ್ಷಿಸುವ ಸಂಪೂರ್ಣ ಬದಲಾವಣೆ ಇಲ್ಲಿ ಕಾಣುತ್ತಿಲ್ಲ ಅಲ್ಲವೇ? ಮುಂದಿನ ವಚನವು "ತೋಳವು ಕುರಿಯ ಸಂಗಡ ಮೇಯುವುದು, ಸಿಂಹವು ಎತ್ತಿನಂತೆ ಹುಲ್ಲು ತಿನ್ನುವುದು ಹಾವಿಗೆ ಧೂಳೇ ಆಹಾರವಾಗುವುದು. ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರೂ ಕೇಡು ಮಾಡುವುದಿಲ್ಲ, ಯಾರೂ ಹಾಳು ಮಾಡುವುದಿಲ್ಲ" ಎಂದು ಹೇಳುತ್ತದೆ (ಯೆಶಾಯ 65:25).

ಮಾಂಸಹಾರಿ ಪ್ರಾಣಿಯಾದ ಸಿಂಹವು ಸಸ್ಯಹಾರಿಯಾಗುವುದು ಸಸ್ಯಹಾರಿ ಮನುಷ್ಯ ವರ್ಗದವರಿಗಿಂತ ಇನ್ನೂ ಹೆಚ್ಚಿನ ಬದಲಾವಣೆಯಾಗಿದೆ, ಪಾಪವು ಏದೆನ್ ತೋಟದಲ್ಲಿ ಹುಟ್ಟುವುದಕ್ಕಿಂತ ಮುಂಚೆ ಇದ್ದಂತಹ ಆದರ್ಶಪ್ರಾಯವಾದ ಸ್ಥಿತಿಯು ಮರುಸ್ಥಾಪನೆಯಾಗಬೇಕಾದರೆ ಮರುಸೃಷ್ಟಿಯೇ ಆಗಬೇಕಾದ ಅಗತ್ಯವಿದೆ.

ಯೆಶಾಯ 65 ಅಧ್ಯಾಯದಲ್ಲಿ ದೇವರು ಮಾಡುವ ನೂತನಾಕಾಶಮಂಡಲ ಮತ್ತು ನೂತನಭೂಮಂಡಲದ ಸೃಷ್ಟಿಯನ್ನು ಯೆರೂಸಲೇಮಿನ ಮರುಸೃಷ್ಟಿಯೊಂದಿಗೆ ವಿವಿಧ ಹಂತಗಳಲ್ಲಿ ಜರುಗುವ ಸೃಷ್ಟಿ ಪ್ರಕ್ರಿಯೆಯನ್ನು ಪ್ರಸ್ತುತಪಡಿಸುತ್ತದೆ. ಇದನ್ನು ಯೆಶಾಯ 11ನೇ ಅಧ್ಯಾಯದೊಂದಿಗೆ ಹೋಲಿಸಿರಿ. ಇಲ್ಲಿ ಮೆಸ್ಸೀಯನು ನ್ಯಾಯವಾಗಿ ತೀರ್ಪುಮಾಡುತ್ತಾನೆ (ಯೆಶಾಯ 11:1–5) ನಂತರ, ಎಲ್ಲವೂ ಮುಗಿದ ಬಳಿಕ ಭೂಮಿ ಪರ್ಯಂತ ವ್ಯಾಪಿಸಿದ ದೇವರ ಪರಿಶುದ್ಧ ಪರ್ವತದಲ್ಲಿ ಶಾಂತಿಯು ನೆಲೆಸಿರುತ್ತದೆ. ಯೆಶಾಯ 11ನೇ ಅಧ್ಯಾಯದಲ್ಲಿ ಪ್ರಸ್ತುತಪಟ್ಟಿರುವ ಚಿತ್ರಣವು ಯೆಶಾಯ 65ನೇ ಅಧ್ಯಾಯದಲ್ಲಿರುವ ಚಿತ್ರಣಕ್ಕೆ ಹೋಲುತ್ತದೆ: "ತೋಳವು ಕುರಿಯ ಸಂಗಡ ವಾಸಿಸುವುದು, ಚಿರತೆಯು ಮೇಕೆ ಮರಿಯೊಂದಿಗೆ ಮಲಗುವುದು.... ಸಿಂಹವು ಎತ್ತಿನಂತೆ ಹುಲ್ಲು ತಿನ್ನುವುದು (ಯೆಶಾಯ 11:6,7). ಇಲ್ಲಿರುವ ದೇವರ ಪರಿಶುದ್ಧ ಪರ್ವತವು ಚೀಯೋನ್

ಬೆಟ್ಟವೆಂದು ಆರಂಭದಲ್ಲಿ ಕರೆಯಲ್ಪಟ್ಟಿದೆ, ಇದು ಅಂತಿಮವಾಗಿ ದೇವರು ಬಿಡುಗಡೆ ಹೊಂದಿದ ತನ್ನ ಜನರಿರುವ ನೂತನ ಲೋಕದಲ್ಲಿ ಏನು ಮಾಡುತ್ತಾನೆಂದು ವಾಗ್ದಾನ ಮಾಡಿರುವನೋ ಅದರ ಪೂರ್ವಸೂಚಕವಾದದೂ, ಸಾಂಕೇತಿಕವಾದದೂ ಆಗಿದೆ.

ಕೇವಲ 60, 70, 90 ಮತ್ತು ನೂರು ವರುಷಗಳು ಬದುಕುವ ಬದಲು ಹೆಚ್ಚಿನ ಜನರು ಸಾವಿರ ವರುಷ ಅಥವಾ ಅದಕ್ಕಿಂತಲೂ ಹೆಚ್ಚು ವರುಷಗಳು ಬದುಕುತ್ತಾರೆ ಎಂದು ಭಾವಿಸಿದರೂ ಮನುಷ್ಯರ ಮೂಲಭೂತ ಸಮಸ್ಯೆಯು ಬಗೆಹರಿಯುವುದಿಲ್ಲ ಯಾಕೆ? ನಿತ್ಯಜೀವವೊಂದೆ ಮನುಷ್ಯರ ಅತಿದೊಡ್ಡ ಕೊರತೆಗೆ ಉತ್ತರವಾಗಿದೆ ಯಾಕೆ?

**ಸೋಮವಾರ** **ಮಾರ್ಚ್ 22**

## ದೈವೀಕ "ಅಯಸ್ಕಾಂತ" (ಯೆಶಾಯ 66:1–19)

ಯೆಶಾಯ 66:1–19 ವಚನಗಳನ್ನು ಓದಿರಿ. ಯೆಶಾಯನು ಇದನ್ನು ಬರೆದ ಕಾಲವನ್ನು ಮನಸ್ಸಿನಲ್ಲಿಟ್ಟುಕೊಂಡು ಆತನು ಮೂಲತಃ ನಮಗೆ ಯಾವ ಸಂದೇಶವನ್ನು ಇಲ್ಲಿ ಕೊಡುತ್ತಿದ್ದಾನೆ ಹೇಳಿರಿ?

ಪ್ರವಾದಿಯ ಮುಖಾಂತರ ದೇವರು ಸತ್ಯವೇದದ ಪರ್ಯಂತವಿರುವ ಎಚ್ಚರಿಕೆಯ ಮನವಿಗಳನ್ನು ತಿರುಗಿ ಹೇಳುತ್ತಿದ್ದಾನೆ. ನಾನು ಕಟಾಕ್ಷಿಸುವುದು ಎಂಥವನೆಂದರೆ ದೀನನೂ ಮನಮುರಿದವನೂ ನನ್ನ ಮಾತಿಗೆ ಭಯಪಡುವವನೂ ಆಗಿರುವನೇ/ ಯೆಹೋವನ ಮಾತಿಗೆ ಭಯಪಡುವವರೇ (ಯೆಶಾಯ 66:2,5). ಯೆಶಾಯ 40:1ರಲ್ಲಿ ಹೇಳಿರುವಂತೆ ಅವರನ್ನು ಆತನು ಸಂತೈಸುತ್ತಾನೆ (ಯೆಶಾಯ 66:13). ಆದರೆ ತನಗೆ ತಿರುಗಿ ಬಿದ್ದವರನ್ನು ನಾಶಮಾಡುತ್ತಾನೆ. ಇಂಥವರಲ್ಲಿ ಯಜ್ಞ ನೈವೇದ್ಯ ಧೂಪ ಅರ್ಪಿಸುವ ಕಪಟಿಗಳನ್ನು ನಾಶಪಡಿಸುತ್ತಾನೆ.

(ಯೆಶಾಯ 66:3,4ನ್ನು ಯೆಶಾಯ 1:10–15 ವಚನಗಳಿಗೆ ಹೋಲಿಸಿರಿ). ತನಗೆ ವಿಧೇಯರಾದವರನ್ನು ದ್ವೇಷಿಸುವವರನ್ನೂ ತಿರಸ್ಕರಿಸುವವರನ್ನೂ ನಾಶಪಡಿಸುತ್ತಾನೆ (ಯೆಶಾಯ 66:5). ಅನ್ಯಧಾರ್ಮಿಕ ಪದ್ಧತಿಗಳನ್ನು ಅಸಹ್ಯ ಆಚರಣೆಗಳನ್ನು ಮಾಡುವವರನ್ನು ನಾಶ ಮಾಡುತ್ತಾನೆ (ಯೆಶಾಯ 66:17).

ಇವರು ಯೆರೂಸಲೇಮಿನ ದೇವಾಲಯದಲ್ಲಿ ಅಸಹ್ಯ ಆಚರಣೆಗಳನ್ನು ಯಾಕೆಂದರೆ ಮಾಡುತ್ತಿದ್ದವರಂತೆಯೇ ಇವರೂ ಸಹಾ ಮಾಡುತ್ತಿದ್ದರು (ಯೆಹೆ 8:7–12).

ಯೆಶಾಯ 66:3ನೇ ವಚನವನ್ನು ನೋಡಿರಿ ವಚನವು ಏನು ಹೇಳುತ್ತದೆ? ಅಧ್ಯಾತ್ಮಿಕವಾದ ಯಾವ ನಿಯಮಗಳು ಇಲ್ಲಿ ಪ್ರಕಟಗೊಂಡಿವೆ? ಸಮಕಾಲೀನ ಕ್ರೈಸ್ತರ ಮತ್ತು ಆರಾಧನೆಯ ವಿಷಯದಲ್ಲಿ ಸಂದರ್ಭಾನುಸರವಾಗಿ ಇದೇ ಆಲೋಚನೆಯನ್ನು ವ್ಯಕ್ತಪಡಿಸಬಹುದು ಹೇಗೆ?

ದೇವರು ಜನಾಂಗಗಳನ್ನು ತನ್ನ ಕಡೆಗೆ ಸೆಳೆಯಲು ಅಯಸ್ಕಾಂತದಂತೆ ಕಾರ್ಯನಿರ್ವಹಿಸುತ್ತಾನೆ ಹೇಗೆ? (ಯೆಶಾಯ 66:18,19).

ತನ್ನ ವೈರಿಗಳನ್ನು ನಾಶಮಾಡಿದ ಮೇಲೆ (ಯೆಶಾಯ 66:14–17) ದೇವರು ಜನರನ್ನು ಯೆರೂಸಲೇಮಿಗೆ ಸೆಳೆಯಲು ಅಯಸ್ಕಾಂತದಂತಾಗಿ ತನ್ನ ಮಹಿಮೆಯನು ಪ್ರಕಟಿಸುತ್ತಾನೆ (ಯೆಶಾಯ 2:2–4 ವಚನಗಳಿಗೆ ಹೋಲಿಸಿರಿ). ಆತನು ಒಂದು ಸೂಚಕವನ್ನು ಅವರ ಮಧ್ಯೆದಲ್ಲಿ ಇಡುತ್ತಾನೆ. ಇದನ್ನು ಇಲ್ಲಿ ಹೆಸರಿಸಿಲ್ಲವಾದರೂ ಅಂತಿಮದಲ್ಲಿ ಯೆಶಾಯನು ಹೇಳಿರುವ ಗುರುತನ್ನು ಸೂಚಿಸುತ್ತದೆ. ದೇವರು ಆತನ ಜನರಿಗೆ ಅವರ ದೇಶದಲ್ಲಿ ಸಂತೋಷವನ್ನು ಆನಂದವನ್ನು ಕೊಡುತ್ತಾನೆ (ಯೆಶಾಯ 55:12,13). ನಾಶಮಾಡಿದ ಮೇಲೆ ತನ್ನ ಜನರನ್ನು ಮರುಸ್ಥಾಪನೆ ಮಾಡಿ ತನ್ನ ಮಹಿಮೆಯನ್ನು ಪ್ರಕಟಿಸುತ್ತಾನೆ. ಅದು ಆತನ ಮರುಸ್ಥಾಪನೆಯ ಅನುಗ್ರಹಕ್ಕೆ ಗುರುತಾಗಿರುತ್ತದೆ. ಇದು ದೇವರು ನೋಹನಿಗೆ ಜಲಪ್ರಳಯದ ನಂತರ ಕೊಟ್ಟ ಮುಗಿಲುಬಿಲ್ಲಿನ ಗುರುತಿನಂತಿದೆ (ಆ.ಕಾಂಡ 9:13–17).

ಯೆಶಾಯ 66:5ನ್ನು ಓದಿರಿ. ಆತನ ವಾಕ್ಯಕ್ಕೆ (ಮಾತಿಗೆ) ಭಯಪಡುವುದು ಎಂದರೇನು? ಯಾಕೆ ದೇವರು ತನ್ನ ಮಾತಿಗೆ ನಾವು ಭಯಪಡಬೇಕೆಂದು

ಬಯಸುತ್ತಾನೆ? ನೀವು ಭಯಪಡುತ್ತಿಲ್ಲವೆಂದರೆ ನಿಮ್ಮ ಹೃದಯದ ಸ್ಥಿತಿಯ ಬಗ್ಗೆ ಇದು ಏನನ್ನು ಹೇಳುತ್ತದೆ?

**ಮಂಗಳವಾರ** **ಮಾರ್ಚ್ 23**

## ಧರ್ಮಪ್ರಚಾರಕರು ಮತ್ತು ಆರಾಧನಾ ನಾಯಕರು (ಯೆಶಾಯ 66:19–21)

ಜನಾಂಗಗಳಲ್ಲಿ ಚದುರಿಹೋಗಿರುವ ಆತನ ಜನರನ್ನು ದೇವರಿಗೆ ಕಾಣಿಕೆಯಾಗಿ ತರುವ ಹತಶೇಷ (ಬದುಕುಳಿದ) ಜನರು ಎಂಬುದರ ಅರ್ಥವೇನು? (ಯೆಶಾಯ 66:19,20).

ದೇವರು ಭೂಮಿಯ ಕಟ್ಟಕಡೆಯುವರೆಗೂ ನಾಶವಾಡಿದಾಗ ಬದುಕುಳಿದವರನ್ನು (ಹತಶೇಷರನ್ನು) ತನ್ನ ಬಗ್ಗೆ ಅರಿಯದ ಜನರಿಗೆ ತನ್ನ ಮಹಿಮೆಯನ್ನು ಪ್ರಕಟಿಸಲು ಕಳುಹಿಸುವನು (ಯೆಶಾಯ 66:19). ಇದು ಹಳೆಯ ಒಡಂಬಡಿಕೆಯು ಧರ್ಮಪ್ರಚಾರದ ವಿಷಯದಲ್ಲಿ ಹೇಳುವ ಹೇಳಿಕೆಗಳಲ್ಲಿ ಬಹಳ ಸ್ಪಷ್ಟವಾದ ಹೇಳಿಕೆಯಾಗಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಇಬ್ರಿಯ ಜನಾಂಗದ ಕಡೆಗೆ ಜನರನ್ನು ಸೆಳೆಯುವುದು ಮಾತ್ರವಲ್ಲ, ಆದರೆ ಕೆಲವು ಇಬ್ರಿಯರು ಎಲ್ಲಾ ದೇಶಗಳಿಗೆ ಹೋಗಿ ಸತ್ಯದೇವರ ಬಗ್ಗೆ ಸಾರುವರು. ಇದು ಹೊಸ ಒಡಂಬಡಿಕೆಯು ವ್ಯಕ್ತಪಡಿಸುವ ಮಾದರಿಯಾಗಿದೆ. ಯೆಹೂದ್ಯರು ಬ್ಯಾಬಿಲೋನಿಗೆ ಸೆರೆಯಾಗಿ ಹೋದ ಕಾಲದಿಂದ ಯೇಸುಕ್ರಿಸ್ತನ ಕಾಲದವರೆಗೆ ಯೆಹೂದ್ಯ ಧರ್ಮಪ್ರಚಾರದ ಕೆಲಸಗಳು ನಡೆದಾಗ್ಯೂ (ಮತ್ತಾಯ 23:15) ಆರಂಭಿಕ ಕ್ರೈಸ್ತರು ಸುವಾರ್ತೆಯನ್ನು ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಿದರು (ಕೊಲಸ್ಸೆ 1:23).

ಹೇಗೆ ಇಸ್ರಾಯೇಲ್ಯರು ಧಾನ್ಯ ನೈವೇದ್ಯವನ್ನು ದೇವರಿಗೆ ತಂದು ದೇವಾಲಯದಲ್ಲಿ ಅರ್ಪಿಸುತ್ತಿದ್ದರೋ ಹಾಗೆಯೇ ಧರ್ಮಪ್ರಚಾರಕರು ಆತನಿಗೆ ಕಾಣಿಕೆಯನ್ನು ಸಮರ್ಪಿಸುತ್ತಾರೆ, ಸಮಸ್ತ ಜನಾಂಗಗಳಲ್ಲಿ ಚದುರಿ ಹೋಗಿರುವ ಸಹೋದರರನ್ನು ಸಮರ್ಪಿಸುತ್ತಾರೆ (ಯೆಶಾಯ 66:20). ಇದು ದೇವರ ಸನ್ನಿಧಾನದಲ್ಲಿ ವಿಧಿಸುವ ಯಜ್ಞವಾಗಿರದೆ ಧಾನ್ಯಗಳನ್ನು ತಂದು

ಸಮರ್ಪಿಸಿದಂತೆಯೇ ಮಾನಸಾಂತರ ಪಟ್ಟ ಜನರನ್ನು ಸಜೀವ ಯಜ್ಞವಾಗಿ ದೇವರಿಗೆ ಸಮರ್ಪಣೆ ಮಾಡುವುದಾಗಿದೆ (ರೋಮ 12:1) ಯಜ್ಞಗಳನ್ನು ಸಮರ್ಪಿಸುತ್ತಿದ್ದಂತೆಯೇ, ಧಾನ್ಯ ಮತ್ತು ಇತರೆ ಕಾಣಿಕೆಗಳನ್ನು ಸಮರ್ಪಿಸುತ್ತಿದ್ದಂತೆಯೇ ದೇವರಿಗೆ ಮೀಸಲಾದ ಲೇವಿಯರನ್ನು ಸಹಾ ದೇವರ ಸೇವೆಯ ಮಾಡುವ ಸಲುವಾಗಿ ಆತನಿಗೆ ಪ್ರತಿಷ್ಠೆ ಮಾಡಬೇಕಾಗಿತ್ತು (ಅರಣ್ಯಕಾಂಡ 8:11). ಅವರಲ್ಲಿ ಯಾಜಕರೂ ಲೇವಿಯರೂ ಆಗತಕ್ಕವರನ್ನು ಆರಿಸಿಕೊಳ್ಳುವ ದೇವರ ವಾಗ್ದಾನದ ಮಹತ್ವವೇನು? (ಯೆಶಾಯ 66:21).

ಯೆಶಾಯ 66:21ರಲ್ಲಿ ಸಮಸ್ತ ಜನಾಂಗಗಳಲ್ಲಿ ಚದುರಿ ಹೋಗಿರುವ ನಮ್ಮ ಸಹೋದರರು ಎಂದು ತಿಳಿಸುತ್ತದೆ, ಇದರ ಹಿಂದಿನ ವಚನವು ದೇವರ ಮಹಿಮೆಯ ನೋಡದಿರುವ ಅನ್ಯಜನಾಂಗಗಳು, ಜನಾಂಗಗಳಲ್ಲಿ ದೇವರ ಮಹಿಮೆಯನ್ನು ಪ್ರಕಟಿಸುವವರಾಗಿದ್ದು ಇವರನ್ನು ಯಾಜಕರು ಮತ್ತು ಲೇವಿಯರೊಂದಿಗೆ ಆರಾಧಿಸುವವರ ನಾಯಕರನ್ನು ದೇವರು ಆರಿಸಿಕೊಳ್ಳುತ್ತಾನೆ. ಇದುವೆ ತಾನೆ ಕ್ರಾಂತಿಕಾರಕ ಬದಲಾವಣೆ, ದೇವರು ಆರೋನನ ಸಂತಾನದವರನ್ನು ಮಾತ್ರ ಯಾಜಕರಾಗಿ ಸೇವೆ ಸಲ್ಲಿಸಲು ಆರಿಸಿಕೊಂಡಿದ್ದು, ಲೇವಿಯರು ಆರೋನನ ಸಂತಾನದವರಿಗೆ ದೇವರ ಸೇವೆಯಲ್ಲಿ ಸಹಾಯಕರಾಗಿರಬೇಕಾಗಿತ್ತು. ಅನ್ಯಜನಾಂಗದವರು ಎಂದೆಂದಿಗೂ ಅಕ್ಷರಶಃ ಆರೋನನ ಸಂತಾನದವರಾಗಲೀ ಲೇವಿಯ ಸಂತಾನದವರಾಗಲೀ ಆಗುವಂತಿಲ್ಲ. ಆದರೆ ದೇವರು ಅವರಲ್ಲಿ ಕೆಲವರನ್ನು ತನ್ನ ಸೇವೆಗೆ ಅಧಿಕೃತವಾಗಿ ನೇಮಿಸಿಕೊಳ್ಳುತ್ತಾನೆ, ಆರೋನ ಮತ್ತು ಲೇವಿಯರ ಸಂತಾನ ಹೊರತುಪಡಿಸಿ ಇತರೆ ಯೆಹೂದ್ಯರನ್ನೂ ಸಹಾ ನಿಷೇಧಿಸಲಾಗಿತ್ತು.

1 ಪೇತ್ರ 2:9,10ನ್ನು ಓದಿರಿ ಇದನ್ನು ಪೇತ್ರನು ಯಾರನ್ನು ಕುರಿತು ಬರೆಯುತ್ತಾನೆ? ಪರಿಶುದ್ಧ ಜನಾಂಗದ ಸದಸ್ಯರಾಗಿರುವ ನಮ್ಮೊಬ್ಬಬ್ಬರಿಗೂ ಇಂದು ಯಾವ ಸಂದೇಶವನ್ನು ಕೊಡುತ್ತಾನೆ? ನಾವು ಆತನು ಆರಿಸಿಕೊಂಡ ಮೂಲ ಜನಾಂಗದವರಿಗಿಂತ ಉತ್ತಮರಾಗಿದ್ದೇವೆಯೇ? (ವಿ.ಕಾಂಡ 19:6).

**ಬುಧವಾರ** **ಮಾರ್ಚ್ 24**

## ನಂಬಿಕೆಯ ಸಮುದಾಯ (ಯೆಶಾಯ 66:21)

ಇಸ್ರಾಯೇಲ್ಯರು ಯಾಜಕರಾಜ್ಯವೂ ಪರಿಶುದ್ಧ ಜನಾಂಗವೂ ಆಗಿದ್ದರು (ವಿ.ಕಾಂಡ 19:6) ವಿಶೇಷವಾದ ಯಾಜಕರು ಮೀಸಲಾದ ಆರಾಧನಾ ನಾಯಕರಾಗಿರುತ್ತಿದ್ದರು. ಆದರೆ ಭವಿಷ್ಯಕಾಲದಲ್ಲಿ ಕೆಲವು ಅನ್ಯಜನಾಂಗದವರು ಆರಾಧನಾ ನಾಯಕರಾಗುತ್ತಾರೆ (ಯೆಶಾಯ 66:21).

ಈ ಬದಲಾವಣೆಯು ನಂಬಿಕೆಯ ಸಮುದಾಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ? (ನೋಡಿರಿ ಮತ್ತಾಯ 28:19, ಅ.ಕೃ. 26:20, ಗಲಾತ್ಯ 3:28, ಕೊಲಸ್ಸೆ 3:11, 1 ತಿಮೊಥೆ 3:16).

ದೇವರ ಹೊಸ ಸೃಷ್ಟಿಯಲ್ಲಿ ಅನ್ಯಜನಾಂಗವು ದೇವರ ಜನರೊಂದಿಗೆ ಸೇರುವುದು ಮಾತ್ರವಲ್ಲ ನಂಬಿಕೆಯ ಮೂಲಕ ಎಲ್ಲಾ ಜನಾಂಗದವರು ಸೇರಿದ ಸಮುದಾಯವು ರಾಜವಂಶಸ್ಥರಾದ ಯಾಜಕರಾಗಿದ್ದು ಅನ್ಯಜನಾಂಗದವರು ಯೆಹೂದ್ಯರೊಟ್ಟಿಗೆ ಪಾಲುಗಾರರಾಗಿದ್ದಾರೆ. ಆದುದರಿಂದ ಯೆಹೂದ್ಯರು ಮತ್ತು ಅನ್ಯರು ಎಂಬ ಭೇದವು ಕಾರ್ಯತಹ ಅಸಂಗತವಾಗಿದೆ.

ಯೆಶಾಯ ಈ ಪ್ರವಾದನೆಯು ಯಾವಾಗ ನೆರವೇರಿತು?

ಅನ್ಯರಿಗೆ ಸುವಾರ್ತೆ ಸಾರುವವನಾದ ಪೌಲನು ಯೆಹೂದ್ಯ, ಗ್ರೀಕ್ ಎಂಬ ಭೇದವಿಲ್ಲ ಕ್ರಿಸ್ತನಲ್ಲಿ ಎಲ್ಲರೂ ಒಂದೇ ಎಂದು ನುಡಿದಿದ್ದಾನೆ. ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ (ಗಲಾತ್ಯ 3:28,29). ವಾಗ್ದಾನಕ್ಕನುಸಾರವಾಗಿ ಬಾಧ್ಯತೆಯನ್ನು ರಾಜವಂಶಸ್ಥ ಯಾಜಕರೆಂಬ ಉನ್ನತವಾದ ಪದವಿಯನ್ನು ಪಡೆದುಕೊಳ್ಳುವುದು ಶ್ರೇಷ್ಠ ವರ್ಗಕ್ಕೆ ಸೇರುವುದಕ್ಕೋಸ್ಕರ ನೀಡಿದ ಹಕ್ಕುದಾರಿಕೆಯಲ್ಲ. ಆದರೆ ಇದು ನಮ್ಮನ್ನು ಕತ್ತಲೆಯೊಳಗಿಂದ ಕರೆದು ಆಶ್ಚರ್ಯಕರವಾದ ಬೆಳಕಿಗೆ ಸೇರಿಸಿರುವಾತನ ಮಹತ್ಕಾರ್ಯಗಳನ್ನು ಯಹೂದ್ಯರೊಂದಿಗೆ ಸೇರಿಕೊಂಡು ಸಾರಿ ಹೇಳುವುದಕ್ಕೆ ಕೊಟ್ಟ ಆದೇಶವಾಗಿದೆ. ಅನ್ಯರು ಉನ್ನತಸ್ಥಾನ ಪಡೆದುಕೊಳ್ಳುವುದರಿಂದ ದೇವರು ನಮಗೆ ಅನ್ಯಾಯ ಮಾಡಿದ್ದಾನೆಂದು

ಗೋಣಗುಟ್ಟುವ ಹಕ್ಕು ಯೆಹೂದ್ಯರಿಗಿಲ್ಲ.

ಹಾಗೆಯೇ ರಕ್ಷಣೆ ಪಡೆದ ಅನ್ಯರು ತಮಗೆ ಉತ್ತಮ ಸ್ಥಿತಿ ದೊರಕಿತೆಂದು ಯೆಹೂದ್ಯ ಸಹೋದರ ಸಹೋದರಿಯರನ್ನು ಅಗೌರವದಿಂದ ಕಾಣುವ ಹಕ್ಕನ್ನು ಅವರೂ ಸಹಾ ಪಡೆದಿಲ್ಲ. ಹೊತ್ತು ಮಾಡಿಕೊಂಡು ಕೂಲಿಗೆ ಬಂದವರು ಮುಂಚಿತವಾಗಿ ಬಂದವರನ್ನು ತಾತ್ಸಾರ ಮಾಡಬಾರದು (ಮತ್ತಾಯ 20:1–16). ದೈವೋಕ್ತಿಗಳು ಮೊದಲು ಯೆಹೂದ್ಯರ ವಶಕ್ಕೆ ಒಪ್ಪಿಸಲ್ಪಟ್ಟವು, ಅವರು ದೇವರು ಕೊಡುವ ಪ್ರಕಟನೆಯನ್ನು ಜನರಿಗೆ ತಲುಪಿಸುವ ಕಾಲುವೆಗಳಾಗಿದ್ದರು (ರೋಮ 3:2).

ಪೌಲನು ಅನ್ಯರನ್ನು ಕುರಿತು "ಕೆಲವು ಕೊಂಬೆಗಳು ಮುರಿದುಹಾಕಲ್ಪಡಲು ಕಾಡೆಣ್ಣೆ ಮರದಂತಿರುವ ನೀನು ಅವುಗಳ ತಾವಿನಲ್ಲಿ ಕಸಿ ಕಟ್ಟಿಸಿಕೊಡವನಾಗಿ ಊರೆಣ್ಣೇ ಮರದ ರಸವತ್ತಾದ ಬೇರಿನಲ್ಲಿ ಪಾಲು ಹೊಂದಿದರೂ ಆ ಕೊಂಬೆಗಳನ್ನು ಕಡೆಗಾಣಿಸಿ ನಿನ್ನನ್ನು ಹೆಚ್ಚಿಸಿಕೊಳ್ಳಬೇಡ, ಹೆಚ್ಚಿಸಿಕೊಂಡರೂ ಆ ಬೇರಿಗೆ ನೀನು ಆಧಾರವಲ್ಲ ಅದು ನಿನಗೆ ಆಧಾರವಾಗಿದೆಯಷ್ಟೆ (ರೋಮ 11:17,18).

ಶಿಲುಬೆಯ ಸನ್ನಿವೇಶದಲ್ಲಿ ಸುವಾರ್ತೆಯ ಆದೇಶದ ಸನ್ನಿವೇಶದಲ್ಲಿ ಆತ್ಮೀಕ ಅಥವಾ ಜನಾಂಗೀಯ ಅಥವಾ ರಾಜಕೀಯ ವರ್ಗಶ್ರೇಷ್ಠತೆ ಯಾಕೆ ದೇವರ ದೃಷ್ಟಿಯಲ್ಲಿ ಹೇಯಕರವಾಗಿದೆ?

ನಿಮ್ಮನ್ನು ನೀವು ಚೆನ್ನಾಗಿ ಅರಿತುಕೊಳ್ಳಿರಿ: ನೀವು ಆತ್ಮೀಕ ಅಥವಾ ಜನಾಂಗೀಯ ಮೇಲರಿಮೆಯ ಭಾವನೆಯನ್ನು ಬೆಳೆಸಿಕೊಂಡಿರುವಿರಾ? ಬೆಳೆಸಿಕೊಂಡಿದ್ದರೆ ಪಶ್ಚಾತ್ತಾಪಪಡಿರಿ!

**ಗುರುವಾರ** **ಮಾರ್ಚ್ 25**

## "ನಿಮ್ಮ ಸಂತತಿಯೂ ನಿಮ್ಮ ಹೆಸರೂ ಸ್ಥಿರವಾಗಿ ನಿಲ್ಲುವವು" (ಯೆಶಾಯ 66:24–24)

ಯೆಶಾಯ 66:22ನ್ನು ಓದಿರಿ ಈ ವಚನಗಳು ನಮಗೆ ಏನು ಹೇಳುತ್ತವೆ? ಯಾವ ನಿರೀಕ್ಷೆಯನ್ನು ಇಲ್ಲಿ ನಾವು ಕಂಡುಕೊಳ್ಳುತ್ತೇವೆ?

ಯೆಶಾಯ 66:22ರಲ್ಲಿರುವ ಅದ್ಭುತವಾದ ವಾಗ್ದಾನಗಳಲ್ಲಿ ಒಂದಾದ ವಾಗ್ದಾನವನ್ನು ನೋಡುತ್ತೇವೆ. ಎಚ್ಚರಿಕೆಯಿಂದ ಇದನ್ನು ಓದಿರಿ. ನೂತನಾಕಾಶ ಮಂಡಲದಲ್ಲಿ ಮತ್ತು ನೂತನ ಭೂಮಂಡಲದಲ್ಲಿ ನಮ್ಮ ಸಂತಾನವೂ ನಮ್ಮ ಹೆಸರೂ ಎಂದೆಂದೂ ಸ್ಥಿರವಾಗಿ ನಿಲ್ಲುವವು. ಅಲ್ಲಿ ಎಂದೆಂದಿಗೂ ಕಡಿದು ಹಾಕುವುದು, ಚಿವುಟುವುದು, ಕಸಿಕಟ್ಟುವುದು ಅಥವಾ ಬೇರುಸಹಿತ ಕಿತ್ತುಹಾಕುವುದು ಮುಂತಾದ ಕೃತ್ಯಗಳು ಇಲ್ಲವೇ ಇಲ್ಲ ಹೊಸದಾಗಿ ಸೃಷ್ಟಿಯಾದ ಲೋಕದಲ್ಲಿ ನಮಗೆ ನಿತ್ಯಜೀವದ ವಾಗ್ದಾನವಿರುತ್ತದೆ – ಇದು ಪಾಪರಹಿತ, ಮರಣರಹಿತ ಮತ್ತು ಕಷ್ಟ ಸಂಕಟರಹಿತ ಲೋಕವಾಗಿದ್ದು ನಮ್ಮ ಕ್ರೈಸ್ತ ನಂಬಿಕೆಯು ಅಂತಿಮ ಮತ್ತು ಪರಿಪೂರ್ಣವಾಗಿ ನೆರವೇರಲ್ಪಟ್ಟು ಶಿಲುಬೆಯ ಮೇಲೆ ಕ್ರಿಸ್ತನು ನಮಗಾಗಿ ಏನನ್ನು ಸಾಧಿಸಿದನೋ ಅದರ ಫಲಿತಾಂಶವಾಗಿದೆ.

ನೂತನ ಆಕಾಶಮಂಡಲ ಮತ್ತು ಭೂಮಂಡಲದಲ್ಲಿ ಸಬ್ಬತ್ತಿನ ಜೊತೆಗೆ ಅಮಾವಾಸ್ಯೆಯ ವರ್ಣನೆಯನ್ನು ಯೆಶಾಯ 62:23ರಲ್ಲಿ ಮಾಡಲಾಗಿದೆ. ಏಕೆ?

ಈ ಕಠಿಣವಾದ ವಚನಗಳನ್ನು ಅನೇಕವಾದ ರೀತಿಯಲ್ಲಿ ನೋಡಿದಾಗ್ಯೂ ಒಂದು ರೀತಿ ಹೀಗಿದೆ: ದೇವರು ಧಾರ್ಮಿಕ ವ್ಯವಸ್ಥೆಗೂ ಮೊದಲೇ ಸಬ್ಬತ್ತನ್ನು ಸೃಷ್ಟಿಸಿದನು (ಆ.ಕಾಂಡ 2:2,3). ಆದುದರಿಂದ ಸಬ್ಬತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಆಚರಿಸಲ್ಪಟ್ಟರೂ ಈವಾಗ ಅವುಗಳು ಯಜ್ಞಹೋಮದ ಮೇಲೆ ಆಧಾರವಾಗಿಲ್ಲ. ಹಾಗಾಗಿ, ಸಬ್ಬತ್ತು ಮರುಸ್ಥಾಪನೆಯಾದ ಅವಧಿಯಲ್ಲಿ ಅಬಾಧಿತವಾಗಿ ಹೊಸ ಭೂಮಂಡಲದಲ್ಲಿ ಮುಂದುವರೆಯುತ್ತಾ ಹೋಗುತ್ತದೆ.

ಅಮಾವಾಸ್ಯೆಯು ಯಜ್ಞಸಮರ್ಪಣೆಗೆ ಮೀಸಲಾಗಿತ್ತಲ್ಲದೆ ಅದು ಆರಾಧನೆಯ ದಿನವಾಗಿತ್ತು ಎಂಬುದಕ್ಕೆ ಸತ್ಯವೇದದಲ್ಲಿ ಯಾವುದೇ ಸುಳುಹು ಸಿಕ್ಕುವುದಿಲ್ಲ. ಅವುಗಳು ಆರಾಧನೆಯ ದಿನಗಳಾಗಿರಬಹುದು (ಆದರೆ ವಿಶ್ರಾಂತಿ ಪಡೆದುಕೊಳ್ಳುವ ವಾರದ ಸಬ್ಬತ್ತುಗಳ ಹೊಸ ಭೂಮಂಡಲದಲ್ಲಿ ತಿಂಗಳು ತಿಂಗಳಿಗೆ ಫಲಗಳನ್ನು ನೀಡುವ ಜೀವವೃಕ್ಷದ ಕಾಲ ಚಕ್ರಕ್ಕೆ ಸಂಬಂಧಿಸಿರಬಹುದು–ಪ್ರಕ 22:2).

ಯೆಶಾಯ 66:23ರಲ್ಲಿ ಯಾವುದೇ ನಿರ್ದಿಷ್ಟ ಅರ್ಥವಿರಬಹುದು, ದೇವರ ಜನರು ನಿತ್ಯಕ್ಕೂ ಆತನನ್ನು ಆರಾಧಿಸುತ್ತಾರೆಂಬುದು ನಿರ್ಣಯಾತ್ಮಕವಾದ ಅಂಶವಾಗಿ ತೋರಿಬರುತ್ತದೆ.

ಯೆಶಾಯನು ಕೊನೆಗೆ ರಕ್ಷಣೆಹೊಂದಿದ ಜನರು ದೇವರಿಗೆ ಎದುರು ಬಿದ್ದವರ ಹೆಣವನ್ನು ನೋಡುತ್ತಾರೆ ಎಂಬ ನಕಾರಾತ್ಮಕ ಚಿತ್ರವನ್ನು ಕೊಡುತ್ತಾನೆ ಏಕೆ? ಯೆಶಾಯ 66:24.

ಆತನ ಕಾಲದ ಜನರಿಗೆ ಎಚ್ಚರಿಕೆ ಕೊಡುವವನಾಗಿ ಯೆಶಾಯನು ಬ್ಯಾಬಿಲೋನಿನ ನಾಶದಲ್ಲಿ ಬದುಕುಳಿದ ನಂಬಿಗಸ್ತರಿಗೂ, ದೇವರಿಗೆ ಎದುರು ಬಿದ್ದವರಿಗೂ ಇದ್ದ (ಅಂತರ) ವ್ಯತ್ಯಾಸವನ್ನು ಕೂಲಂಕಷವಾಗಿ ತಿಳಿಸಿದ್ದಾನೆ. ಇದು ನಿತ್ಯಕ್ಕೂ ಉಳಿಯುವ ನರಕವಲ್ಲ. ದೇವರಿಗೆ ಎದುರು ಬಿದ್ದವರು (ದಂಗೆ ಎದ್ದವರು) ಹೆಣವಾಗುವರು.

ಆಕಾಶದಿಂದ ಬೆಂಕಿಯು ಬಿದ್ದು ದುಷ್ಟರನ್ನು ದಹಿಸುತ್ತದೆ. ಅವರು ಸಂಪೂರ್ಣವಾಗಿ ಸುಟ್ಟುಬೂದಿಯಾಗುವವರೆಗೆ ಬೆಂಕಿಯು ತನ್ನ ಸುಡುವ ಕೆಲಸವನ್ನು ಮುಂದುವರೆಸುತ್ತದೆ. ಈ ಕೆಲಸವು ಪೂರ್ಣಗೊಂಡ ಮೇಲೆ ನೂತನ ಭೂಮಂಡಲದ ಮರುಸೃಷ್ಟಿ ಕೆಲಸವು ಆರಂಭಗೊಳ್ಳುತ್ತದೆ.

ಯೆಶಾಯನು ಕೊಡುವ ಎಚ್ಚರಿಕೆಯು ಪ್ರಕಟನೆ ಪುಸ್ತಕದ ಪ್ರವಾದನೆಯು ಅಂತಿಮವಾಗಿ ನೆರವೇರುವುದರ ಕಡೆಗೆ ಬೆಟ್ಟು ಮಾಡಿತೋರಿಸುತ್ತದೆ: ಪಾಪಿಗಳು, ಸೈತಾನ ಮತ್ತು ಮರಣವು ಬೆಂಕಿಯ ಕೆರೆಯಲ್ಲಿ ನಾಶವಾಗುವುವು (ಪ್ರಕಟನೆ 20ನೇ ಅಧ್ಯಾಯ) ಇದಾದ ಮೇಲೆ ನೂತನಾಕಾಶಮಂಡಲ, ನೂತನ ಭೂಮಂಡಲ ಮತ್ತು ಪರಿಶುದ್ಧಪಟ್ಟಣ ಅಲ್ಲಿ ಗೋಳಾಟವಿರುವುದಿಲ್ಲ ನರಳಾಟವಿರುವುದಿಲ್ಲ, ಮೊದಲಿದ್ದದೆಲ್ಲಾ ಇಲ್ಲದೆ ಹೋಯಿತು (ಪ್ರಕಟನೆ 21:1–4, ಇದನ್ನು ಯೆಶಾಯ 65:17–19 ಹೋಲಿಸಿರಿ).

ಎಲ್ಲವೂ ಹೊಸತಾಗುವುದು, ಭೂಮಿಯಲ್ಲಿ ವಿಮೋಚನೆ ಹೊಂದಿದವರಿಗೆಲ್ಲಾ ನಿತ್ಯಜೀವವು ಸಿಗುವುದು.

**ಶುಕ್ರವಾರ** **ಮಾರ್ಚ್ 26**

**ಹೆಚ್ಚಿನ ಚಿಂತನೆ :** "ಭೂಮಿಯನ್ನು ಪಾಪದಿಂದ ಶುದ್ಧೀಕರಿಸುವುದು ಎಲೆನ್ ಜಿ ವೈಟಮ್ಮನವರ "ಮಹಾಹೋರಾಟ" ಪುಸ್ತಕದಲ್ಲಿ "ಹೋರಾಟ ಕೊನೆಗೊಂಡಿತು" ಅಧ್ಯಾಅದಲ್ಲಿ ಪುಟ 662 ರಿಂದ 678.

ಅನಂತಕಾಲದ ವರುಷಗಳು ಉರುಳುತ್ತಿರುವ ಹಾಗೆಯೇ ದೇವರ ಮತ್ತು ಕ್ರಿಸ್ತನ ಮಹಿಮೆಯು ವೈಭವಯುತವಾಗಿ ಪ್ರಕಟವಾಗುವುದು ಜ್ಞಾನವು ವೃದ್ಧಿಯಾಗುತ್ತಾ ಹೋದಂತೆ ಪ್ರೀತಿ, ಭಕ್ತಿ ಮತ್ತು ಸಂತೋಷವು ಹೆಚ್ಚುತ್ತಾ ಹೋಗುವುದು.

ಮನುಷ್ಯರು ದೇವರ ಬಗ್ಗೆ ಹೆಚ್ಚಾಗಿ ಕಲಿಯುತ್ತಾ ಹೋದಂತೆ ಅವರು ದೇವರ ಸ್ವಭಾವವನ್ನು ಹೆಚ್ಚಾಗಿ ಮೆಚ್ಚುತ್ತಾ ಹೋಗುತ್ತಾರೆ. ಯೇಸುಕ್ರಿಸ್ತನು ಅವರ ಮುಂದೆ ವಿಮೋಚನೆಯ ಸಂಪತ್ತನ್ನು ತೆರೆಯುತ್ತಿದ್ದಂತೆಯೇ ಮತ್ತು ಸೈತಾನನ ಜೊತೆ ಮಹಾಹೋರಾಟದಲ್ಲಿ ಮಾಡಿದ ಅದ್ಭುತ ಸಾಧನೆಯನ್ನು ಅವರ ಮುಂದೆ ತೆರೆದಿಡುತ್ತಾನೆ. ಆವಾಗ ವಿಮೋಚನೆ ಹೊಂದಿದವರು ಹೆಚ್ಚು ಶ್ರದ್ಧಾಭಕ್ತಿಯಿಂದ ಪುಳಕಿತರಾಗಿ ಆನಂದ ಪರವಶರಾಗಿ ಬಂಗಾರದ ಸ್ವರಮಂಡಲಗಳನ್ನು ಕೈಗೆತ್ತುಕೊಳ್ಳುವರು. ಲಕ್ಷೋಪಲಕ್ಷ ಜನರ ಸ್ವರಗಳು ಹೊರಡಿಸಿದ ಸ್ತುತಿಯ ಹಿಮ್ಮೇಳವು ದೊಡ್ಡದಾಗಿ ಹೊಮ್ಮುತ್ತದೆ. ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವದೆಲ್ಲವೂ ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರಮಾನ ಪ್ರಭಾವ ಅಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ ಎಂದು ಹೇಳುವುದನ್ನು ಕೇಳಿದೆನು (ಪ್ರಕಟನೆ 5:13).

"ಮಹಾಹೋರಾಟವು ಮುಕ್ತಾಯವಾಗಿದೆ. ಪಾಪ ಮತ್ತು ಪಾಪಿಗಳು ಕೊನೆಗೊಂಡವು. ಇಡೀ ವಿಶ್ವವೇ ಶುದ್ಧಗೊಂಡಿದೆ. ಸಾಮರಸ್ಯದ ಸಂತೋಷದ ಒಂದು ನಾಡಿಯು ಅಗಾಧವಾದ ಸೃಷ್ಟಿಯನ್ನೇ ಮಿಡಿಯುತ್ತದೆ. ಯಾವಾತನು ಸಮಸ್ತವನ್ನು ಸೃಷ್ಟಿಸಿದನೋ ಆತನಿಂದ ಜೀವ, ಬೆಳಕು ಮತ್ತು ಸಂತೋಷವು ಅಪರಿಮಿತವಾದ ಅಂತರಿಕ್ಷದ ತುಂಬೆಲ್ಲಾ ಹರಿಯುತ್ತದೆ. ಅತಿಸೂಕ್ಷ್ಮದ

ಅಣುವಿನಿಂದ ಹಿಡಿದು ದೊಡ್ಡಲೋಕದವರಿಗೂ ಎಲ್ಲಾ ನಿರ್ಜೀವ ಮತ್ತು ಸಜೀವ ವಸ್ತುಗಳಲ್ಲಿ ಕಳಂಕವಿಲ್ಲದ ಸೌಂದರ್ಯವು ಮತ್ತು ಪರಿಪೂರ್ಣ ಆನಂದವು "ದೇವರು ಪ್ರೀತಿಸ್ವರೂಪಿ" ಎಂದು ಪ್ರಕಟಪಡಿಸುತ್ತವೆ"– ಎಲೆನ್ ಜಿ ವೈಟಮ್ಮನವರ ಮಹಾಹೋರಾಟ ಪುಸ್ತಕದಲ್ಲಿ 678ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ನೂತನ ಆಕಾಶಮಂಡಲದಲ್ಲಿ ಮತ್ತು ನೂತನಭೂಮಂಡಲದಲ್ಲಿ ನೀತಿವಂತರಿಗೆ ಕೊಡಲ್ಪಡುವ ನಿತ್ಯಜೀವದ ವಾಗ್ದಾನವು ಕ್ರೈಸ್ತೀಯ ವಿಶ್ವಾಸಕ್ಕೆ ಅಸ್ತಿವಾರವಾಗಿದೆ ಏಕೆ? ಆ ವಾಗ್ದಾನವು ಇಲ್ಲದಿದ್ದರೆ ನಮ್ಮ ವಿಶ್ವಾಸದಿಂದ ನಮಗೆ ಏನು ಪ್ರಯೋಜನವಾಗುತ್ತಿತ್ತು?
2. 2 ಪೇತ್ರ 3:10–14ನ್ನು ಓದಿರಿ. ಈ ವಚನಗಳು ಯೆಶಾಯ 66ನೇ ಅಧ್ಯಾಯದಲ್ಲಿರುವ ಆಲೋಚನೆಯನ್ನೇ ಪ್ರತಿಬಿಂಬಿಸುತ್ತವೆ ಹೇಗೆ?

ಸಾರಾಂಶ: ಯೆಶಾಯನು ಪ್ರಸ್ತುತಪಡಿಸುತ್ತಿರುವ ದರ್ಶನವು ನಂಬಲಾಗದಷ್ಟು ವ್ಯಾಪ್ತಿಯುಳ್ಳದ್ದಾಗಿದೆ. ದೇವರು ತಾನು ಆಯ್ದುಕೊಂಡ ಸಮುದಾಯದ ಜನರನ್ನು (ಇಸ್ರಾಯೇಲ್ಯರನ್ನು) ಶುದ್ಧೀಕರಿಸುವುದು ಮಾತ್ರವಲ್ಲ. ಆದರೆ ಆತನು ರಕ್ಷಣೆಯ ಗಡಿಯು ಎಲ್ಲಾ ಜನಾಂಗಗಳನ್ನು ಒಳಗೊಳ್ಳುವಂತೆ ದೊಡ್ಡದು ಮಾಡುತ್ತಾನೆ. ಅಂತಿಮವಾಗಿ ತನ್ನಲ್ಲಿ ನಂಬಿಕೆಯಿಟ್ಟು ನೀತಿಯ ಜೀವಿತವನ್ನು ಜೀವಿಸಿದ ಭಕ್ತಸಮುದಾಯವನ್ನು ಮರುಸೃಷ್ಟಿ ಮಾಡುತ್ತಾನೆ. ಇವರ ಮರುಸೃಷ್ಟಿಯು ಭೂಮಂಡಲದ ಮರುಸೃಷ್ಟಿಗೆ ಎಡೆಮಾಡಿಕೊಡುತ್ತದೆ. ಅಲ್ಲಿ, ಆವಾಗ ಆತನ ಪ್ರಸನ್ನತೆಯೇ ಆತನ ಜನರಿಗೆ ಪರಮ ಆದರಣೆಯನ್ನು ನೀಡುತ್ತದೆ.